
ಪುಟ ಬಂಗಾರ

# ಮತ್ಸರವಿಲ್ಲದ ಮಮತೆ



ನಾನು ಅ.ನ. ಕೃಷ್ಣರಾಯರಂತಹ ಹಿರಿಯ ಸಾಹಿತಿಗಳನ್ನು ಕುರಿತು, ಅವರ ಸಾಹಿತ್ಯವನ್ನು ಕುರಿತು ಬರೆಯುವಷ್ಟು ದೊಡ್ಡವಳಲ್ಲ. ಆದರೆ, ಯಜಮಾನರಾದ ತ.ರಾ.ಸು. ಹಾಗೂ ಅವರಿಗೆ ಹಿರಿಯಣ್ಣನಂತಿದ್ದ ಅ.ನ.ಕೃ. ಅವರ ಸ್ನೇಹ, ಪ್ರೀತಿ, ಒಡನಾಟಗಳ ಬಗ್ಗೆ ನನಗೆ ತಿಳಿದಮಟ್ಟಿಗೆ ಬರೆಯಲೆತ್ನಿಸುತ್ತೇನೆ.

ತ.ರಾ.ಸು. ಅವರಿಗೆ ಅ.ನ.ಕೃ. 'ಕಿಟ್ಟಣ್ಣ'. ಅ.ನ.ಕೃ. ಅವರಿಗೆ ತ.ರಾ.ಸು. 'ಸುಬ್ಬು'. ಈ ಮತ್ಸರವಿಲ್ಲದ ಮಧುರ ಬಾಂಧವ್ಯದ ಆರಂಭ ಹೇಗೋ ಏನೋ ನನಗೆ ಗೊತ್ತಿಲ್ಲ. 1945–46ನೆಯ ಇಸವಿಯಲ್ಲಿ ಎಂ.ಎಸ್. ಚಿಂತಾಮಣಿಯವರು ಆರಂಭಿಸಿ, ನಡೆಸುತ್ತಿದ್ದ 'ವಾಹಿನಿ' ವಾರಪತ್ರಿಕೆಯಲ್ಲಿ ತ.ರಾ.ಸು. ಅವರು ಸಹ ಸಂಪಾದಕರಾಗಿ ಕೆಲಸ ಮಾಡುತ್ತಿದ್ದರು. ಆಗ ಅ.ನ.ಕೃ. ಅವರ ಪ್ರಯತ್ನದಿಂದ ನನ್ನ ರಾಯರು ಮಾವಳ್ಳಿಯಲ್ಲಿ ಒಂದು ಬಾಡಿಗೆ ಮನೆ ಮಾಡಿ ಸಂಸಾರ ಹೂಡಿದ್ದರು. ನಮ್ಮ ಸಂಸಾರದ ಕಷ್ಟ–ಸುಖ ವಿಚಾರಿಸುವುದು ಆಗ ಅ.ನ.ಕೃ. ದಂಪತಿಗಳ ಪಾಲಿಗೆ ಬಿದ್ದ ಕರ್ಮವಾಗಿತ್ತು.